ಓ ಎಸ್ ನಂ.**559/2022**

ಪಿಡಬ್ಲ್ಯೂ.**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **07.06.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ **2** ರಿಂದ **4** ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್ ಎಂ ಕೆ ವಕೀಲರಿಂದಃ–

**2009** ರಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಒಟ್ಟಿಗೆ ವಾಸ ಮಾಡುತ್ತಿರಲಿಲ್ಲ. ಯಾವ ವರ್ಷದಿಂದ ನಮ್ಮ ತಾಯಿ ಬೇರೆ ವಾಸ ಮಾಡುತ್ತಿದ್ದಾರೆ ಎಂದು ಹೇಳಲು ಆಗುವುದಿಲ್ಲ. **2009** ರಲ್ಲಿ ನಮ್ಮ ತಾಯಿ ಕೇಸು ಹಾಕಿದ್ದಾರೆ ಎಂದು ಹೇಳಿದ್ದು ಆ ಸಮಯದಲಿಲ್ಲ ನಾವು ಒಟ್ಟಿಗೆ ವಾಸ ಮಾಡುತ್ತಿರಲಿಲ್ಲ. ನನ್ನ ತಾತನಿಗೆ **3** ಜನ ಗಂಡು ಮಕ್ಕಳು. ಅವರುಗಳೆಂದರೆ ನನ್ನ ತಂದೆ ವೆಂಕಟರಾಮಯ್ಯ, ಗೋವಿಂದರಾಜು ಮತ್ತು ಹನುಮಂತೇಗೌಡ. ಇವರು **3** ಜನ ಒಟ್ಟಾಗಿ ಜಮೀನಿಗೆ ಸಂಬಂಧಿಸಿದ ವ್ಯವಹಾರ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಾತನಿಗೆ ಸಂಬಂಧಿಸಿದ ಪಿತ್ರಾರ್ಜಿತ ಆಸ್ತಿಗಳನ್ನು ಯಾವಾಗ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನಮ್ಮ ಕುಟುಂಬದಲ್ಲಿ ನನ್ನ ಅಕ್ಕಂದಿರಿಗೆ ಗೊತ್ತಿದೆ. ನನ್ನ ತಾಯಿ ಮತ್ತು ನನ್ನ ಚಿಕ್ಕಪ್ಪಂದಿರಿಗೆ ಈ ಬಗ್ಗೆ ಮಾಹಿತಿ ಇದೆಯಾ ಎಂದರೆ ಗೊತ್ತಿಲ್ಲ. ನನ್ನ ತಾಯಿ ಮತ್ತು ಚಿಕ್ಕಪ್ಪಂದಿರು ಸುಮಾರು **25 –30** ವರ್ಷಗಳ ಹಿಂದೆ ಒಟ್ಟಿಗೆ ಇದ್ದರು. ನನ್ನ ತಾಯಿ ಮತ್ತು ಚಿಕ್ಕಪ್ಪಂದಿಗೆ ಕುಟುಂಬದ ವ್ಯವಹಾರ ಬಗ್ಗೆ ಗೊತ್ತಾ ಎಂದರೆ ಇಲ್ಲ. ಈ ಕೇಸಿನ ವಿಚಾರವಾಗಿ ನನ್ನ ತಂದೆ ಬದುಕಿದ್ದಾಗ ಅವರು ಹೇಳುತ್ತಿದ್ದರು ನಂತರ ನನ್ನ ಅಕ್ಕಂದಿರು ಹೇಳುತ್ತಿದ್ದಾರೆ.

ನನ್ನ ವಿದ್ಯಾಭ್ಯಾಸ ಸಂಪೂರ್ಣವಾಗಿ ಬೆಂಗಳೂರಿನಲ್ಲಿ ಆಗಿದೆ ಎಂದರೆ ಸರಿ. ಆಗಿನಿಂದಲೂ ಬೆಂಗಳೂರಿನಲ್ಲೇ ವಾಸ ಮಾಡುತ್ತೇನೆಂದರೆ ಸರಿಯಲ್ಲ. ನನಗೆ ಸುಮಾರು **15 –20** ವರ್ಷದಿಂದ ಊರಿನ ಒಡನಾಟವಿದೆ. ಈ **15– 20** ವರ್ಷದಿಂದ ಈಚೆಗೆ ಆದ ನಮ್ಮ ಕುಟುಂಬದಲ್ಲಿ ಆದ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. **5** ನೇ ಪ್ರತಿವಾದಿಯು ಹುಟ್ಟಿದಾಗಿನಿಂದ ಊರಲ್ಲೇ ವಾಸ ಮಾಡುತ್ತಿದ್ದಾರೆ.

ಓ ಎಸ್ ನಂ.**559/2022**

ಪಿಡಬ್ಲ್ಯೂ.**1**

ಅವರಿಗೆ ಅವರ ತಂದೆ ಮತ್ತು ಅಣ್ಣ ತಮ್ಮಂದಿರ ನಡುವೆ ಆದ ವ್ಯವಹಾರದ ಬಗ್ಗೆ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕುಟುಂಬದ ವ್ಯವಹಾರಗಳ ಬಗ್ಗೆ ಹಾಗೂ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ **5** ನೇ ಪ್ರತಿವಾದಿಯ ಕುಮ್ಮಕ್ಕಿನ ಮೇಲೆ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. **2** ಮತ್ತು **4** ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ನಾನು ಮತ್ತು **5** ನೇ ಪ್ರತಿವಾದಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. **3** ಮತ್ತು **4** ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳು ಅವರ ಹೆಸರಿಗೆ ಖಾತೆ ಆಗದೇ ಇದ್ದ ಕಾರಣ ನಾವು ಅವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಪ್ರತಿವಾದಿ **5** ರಿಂದ **7** ರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.